ಪಿಡಬ್ಲೂ.1: ಲತಾ ಎಸ್ ಮೂರ್ತಿ

<u>ದಿನಾಂಕಃ 30.07.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>

ನಾನು ಗೃಹಿಣಿ. ಆರೋಪಿ ವ್ಯಯಕ್ತಿಕವಾಗಿ ಪರಿಚಯವಿದ್ದಾರೆಯೇ ಎಂದರೆ ಹೌದು ಎಂದು ನುಡಿಯುತ್ತಾರೆ. ಆರೋಪಿ ನನಗೆ ಸುಮಾರು 20 ವರ್ಷಗಳಿಂದ ಪರಿಚಯವಿರುತ್ತಾರೆ. ನನ್ನ ಗಂಡ ಟಿಂಬರ್ ಬಿಸಿನೆಸ್ ಹಾಗೂ ಗಾರ್ಮೆಂಟ್ಸ್ ನಡೆಸುತ್ತಾರೆ. ಆ ಬಗ್ಗೆ ದಾಖಲೆಗಳನ್ನು ಹಾಜರಪಡಿಸಿದ್ದೀರ ಎಂದರೆ ಇಲ್ಲ. ನಿಮ್ಮ ಗಂಡ ಯಾವುದೇ ಟಿಂಬರ್ ಬಿಸಿನೆಸ್ ಹಾಗೂ ಗಾರ್ಮೆಂಟ್ಸ್ ನಡೆಸದ ಕಾರಣ ನಿಮ್ಮ ಬಳಿ ದಾಖಲೆಗಳನು ಇರುವುದಿಲ್ಲ ಎಂದರೆ ಸರಿಯಲ್ಲ.

ಆರೋಪಿ ವಿರುದ್ದ 9 ಲಕ್ಷ ಗಳಿಗೆ ದೂರನ್ನು ದಾಖಲು ಮಾಡಿದ್ದೇನೆ. 9 ಲಕ್ಷ ರೂಗಳನ್ನು ನನ್ನ ಗಂಡ ಆರೋಪಿತರಿಗೆ ನೀಡಿರುತ್ತಾರೆ. ಆರೋಪಿಗೆ ಹಣ ನೀಡುವ ಸಂದರ್ಭದಲ್ಲಿ ನಾನು ಸಹ ಹಾಜರಿದ್ದೇನೆ. ಆರೋಪಿ ದಿನಾಂಕಃ 11.09.2020 ರಂದು ನಮ್ಮ ಮನಗೆ ಬಂದು ಹಣ ಕೇಳಿರುತ್ತಾರೆ. ದಿನಾಂಕಃ 11.09.2020 ರಂದು ನನ್ನ ಗಂಡ ರವರ ಖಾತೆಯಿಂದ 5 ಲಕ್ಷ ರೂಗಳನ್ನು ವರ್ಗಾವಣೆ ಮಾಡಿರುತ್ತಾರೆ. ಹಾಗೆಯೇ ನನ್ನ ಗಂಡ ತಮ್ಮ ಬಳಿ ಇಟ್ಟಿಕೊಂಡಿದ್ದ 1.50 ಲಕ್ಷ ನಗದು ಹಣವನ್ನು ಹಾಗೂ ಅವರ ಸ್ನೇಹಿತರಿಂದ 2.50 ಲಕ್ಷ ಪಡೆದು ಆರೋಪಿಗೆ ಒಟ್ಟು 9 ಲಕ್ಷ ಹಣವನ್ನು ನೀಡಿದ್ದರು.

ನಿಮ್ಮ ಗಂಡ ಸ್ನೇಹಿತರಿಂದ 2.50 ಲಕ್ಷ ಪಡೆದಿದ್ದಾರೆ ಎಂದು ಸಾಕ್ಷ್ಯ ನುಡಿದಿರುತ್ತೀರಿ ಅವರ ಹೆಸರು ಹೇಳುತ್ತೀರ ಎಂದರೆ ಹೇಳಲು ಆಗುವುದಿಲ್ಲ ಎಂದು ನುಡಿಯುತ್ತಾರೆ. 1.50 ಲಕ್ಷ ರೂಗಳನ್ನು ನನ್ನ ಗಂಡ ಮನೆಯ ಖರ್ಚಿಗಾಗಿ ಇಟ್ಟುಕೊಂಡಿದ್ದರು. 5 ಲಕ್ಷ ರೂಗಳನ್ನು ಆರೋಪಿಗೆ ವರ್ಗಾವಣೆ ಮಾಡಿದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿದ್ದೀರ ಎಂದರೆ ಚೆಕ್ಕೇ ದಾಖಲಾತಿ ಆಗಿದ್ದು ಅದನ್ನು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ.

ಯಾವ ಮುಖಬೆಲೆಯ ನೋಟ್ ಅನ್ನು ಆರೋಪಿಗೆ ನೀಡಿರುತ್ತೀರಿ ಎಂದರೆ ನನಗೆ ನೆನಪಿರುವುದಿಲ್ಲ. 9 ಲಕ್ಷ ರೂಗಳನ್ನು ಬ್ಯಾಂಕ್ ಮುಖಾಂತರ ವರ್ಗಾವಣೆ ಮಾಡಬಹುದಾಗಿತ್ತು ಎಂದರೆ ಸಾಕ್ಷಿಯು ಆ ದಿನ 9 ಲಕ್ಷ ರೂಗಳನ್ನು ವರ್ಗಾವಣೆ ಮಾಡಲು ಸಾಧ್ಯವಾಗದೆ ಇದ್ದ ಕಾರಣ 4 ಲಕ್ಷ ಹಣವನ್ನು ನಗದಾಗಿ ನೀಡಿದ್ದೆವು ಎಂದು ನುಡಿಯುತ್ತಾರೆ.

ನನ್ನ ಗಂಡ ವಿ ವಿ ಪುರಂ ಶಾಖೆಯ ಸ್ಟೇಟ್ ಬ್ಯಾಂಕ್ ಖಾತೆದಾರರಾಗಿದ್ದರು ಆ ಮುಖಾಂತರ ವರ್ಗಾವಣೆ ಮಾಡಿದ್ದರು. ನನ್ನ ಗಂಡನ ಖಾತೆಯ ಸಂಖ್ಯೆಯನ್ನು ಹಾಗೂ ಆರೋಪಿಯ ಖಾತೆಯ ಸಂಖ್ಯೆಯನ್ನು ಹೇಳಲು ಆಗುವುದಿಲ್ಲ. ಸಾಕ್ಷ್ಯ ಮುಂದುವರೆದು ಆರೋಪಿಯ ಖಾತೆಯ ಹುಣಸೂರು ಶಾಖೆಯ ಎಸ್ ಬಿ ಐ ಖಾತೆ ಇರಬಹುದು ಎಂದು ನುಡಿಯುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಆಲಿಸಿ ನೀಡಲಾಯಿತು.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**( ಶ್ರೀಮತಿ. ನಿರ್ಮಲ ಎಂ.ಸಿ)**
ಎಸಿಜೆಎಂ ನ್ಯಾಯಾಧೀಶರು
ಲಘು ವ್ಯವಹಾರಗಳ ನ್ಯಾಯಾಲಯ
ಬೆಂಗಳೂರು.